ಮೂಲ ದಾವಾ ಸಂಖ್ಯೆ 115/2016 ಪಿ ಡಬ್ಲ್ಯೂ 1 ಸಿದ್ದಪ್ಪ ಬಿನ್ ಕೊಟ್ರಪ್ಪ

(ದಿನಾಂಕ 10-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ಪ್ರಶ್ನೆಃ 2016 ನೇ ಸಾಲಿನಿಂದ ಇಲ್ಲಿಯವರೆಗೂ ಜಾಕ್ವೆಲ್ ನಿರ್ಮಾಣದ ಜಾಗದಲ್ಲಿ ನೀರನ್ನು ಕುಡಿಯಲು ಹೋಗಿ ದನಕರುಗಳು ಸತ್ತ ಬಗ್ಗೆ ಪೊಲೀಸ್ ಠಾಣೆಯಲ್ಲಿ ವರದಿಯನ್ನು ಮಾಡಲಾಗಿದೆಯೇ?

ಉತ್ತರಃ ಪೈಪ್ ಲೈನ್ ಅಳವಡಿಸಿರುವುದರಿಂದ ಅಲ್ಲಿ ದನಕರುಗಳು ನೀರನ್ನು ಕುಡಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ನುಡಿಯುತ್ತಾರೆ.

ನಮ್ಮ ಗ್ರಾಮದಲ್ಲಿ ಅಂದಾಜು ಜನಸಂಖ್ಯೆ 2000 ಇರಬಹುದು. ಜಾಕ್ವೆಲ್ ಅಳವಡಿಸಿರುವ ಜಾಗದಲ್ಲಿ ಜನರಿಗೆ ಮತ್ತು ಜಾನುವಾರುಗಳಿಗೆ ಸಮಸ್ಯೆ ಇರುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆಯುಕ್ತರನ್ನು ನೇಮಿಸಲು ನಮ್ಮ ತಕರಾರು ಇರುವುದಿಲ್ಲ. ವಾದಿಯರೆಲ್ಲರೂ ಒಂದೇ ಮನೆತನದವರು ಮತ್ತು ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ.

2 ನೇ ವಾದಿ ಸಂಬಂಧದಲ್ಲಿ ನನಗೆ ಅಳಿಯನಾಗಬೇಕು. 3 ನೇ ವಾದಿಯು ನನ್ನ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳಾಗಬೇಕು. 5 ರಿಂದ 9 ನೇ ವಾದಿಯರು ನಮ್ಮ ಕುಲಸ್ಥರು. 10 ನೇ ವಾದಿ ನನ್ನ ಚಿಕ್ಕಪ್ಪನ ಮಗನಾಗಬೇಕು. ನಾನು ಮತ್ತು ನನ್ನ ಸಂಬಂಧಿಕರೆಲ್ಲಾರೂ ಸೇರಿ 1 ನೇ ಪ್ರತಿವಾದಿಯ ವಿರುದ್ಧ ಉದ್ದೇಶಪೂರ್ವಕವಾಗಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನಿರ್ಮಿಸಿರುವಂತಹ ಮೀನಿನ ಕೆರೆಯಿಂದ, ಜಾಕ್ವೆಲ್ ಮತ್ತು ಅಂತರ ಜಲಪೈಪಿನಿಂದ ನಮಗಾಗಲೀ, ಊರಿನ ಜನರಿಗಾಗಲೀ ಯಾವುದೇ

ತೊಂದರೆಯಾಗಿರುವುದಿಲ್ಲವೆಂದರೆ ಸರಿಯಲ್ಲ. ಕಾನೂನುಬದ್ಧವಾಗಿ ಅನುಮತಿಯನ್ನು ಪಡೆದುಕೊಂಡು 1 ನೇ ಪ್ರತಿವಾದಿಯು ಪೈಪ್ ಲೈನನ್ನು ಅಳವಡಿಸಿರುತ್ತಾರೆಂದರೆ ಸರಿಯಲ್ಲ.

2 ವರೆ ಅಡಿ ಸಿಮೆಂಟ್ ಪೈಪನ್ನು 1 ನೇ ಪ್ರತಿವಾದಿಯು ಅಳವಡಿಸಿರುತ್ತಾರೆ. 1 ನೇ ಪ್ರತಿವಾದಿಯು ಅಳವಡಿಸಿರುವಂತಹ ಪೈಪ್ ಲೈನ್ ಭೂಮಿಯ ಒಳಭಾಗದಲ್ಲಿ ಅಳವಡಿಸಲಾಗಿರುತ್ತದೆಂದರೆ ಸರಿ. ಸದರಿ ಪೈಪುಗಳು ಭೂಮಿಯಿಂದ 3 ಅಡಿ ಒಳಭಾಗದಲ್ಲಿ ಅವಡಿಸಲಾಗಿರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ಆದರೆ ಇಳಿಮುಖವಾಗಿ ಭೂಮಿ ಒಳಬಾಗದಲ್ಲಿ ಪೈಪ್ ಲೈನ್ ಅಳವಡಿಸಲಾಗಿರುತ್ತದೆಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ಪ್ರಮಾಣಪತ್ರವನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ